## ಸಿವಿಲ್ ಮತ್ತು ಜೆ.ಎಮ್.ಎಫ್.ಸಿ. ರವರ ನ್ಯಾಯಾಲಯ, ಯಾದಗಿರಿ

### ಸಿ.ಸಿ ನಂ. 101/2015

| | | |
|---|---|---|
| ಸಾಕ್ಷಿಯ ಹೆಸರು | ಕಿಷ್ಟ್ಯಾ | ಚಾಸಾ- 9 |
| ತಂದೆ ಹೆಸರು | ಲಸ್ಕರ ನಾಯಕ | ಪ್ರಾಸಾ- 5 |
| ವಯಸ್ಸು | 60 ವರ್ಷ | ದಿ ಃ 16-10-2018 |
| ಉದ್ಯೋಗ | ಒಕ್ಕಲುತನ | |
| ವಾಸಸ್ಥಳ | ಬೋರಬಂಡಾ | **ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು.** |

ಸಾಕ್ಷಿಗೆ ಹಿಂದಿ ಬರುತ್ತಿದ್ದು ಶ್ರೀ ಎಂ.ಎಸ್.ಕೆ. ವಕೀಲರಿಂದ ಅವರಿಗೆ ಹಿಂದಿಯಲ್ಲಿ ಪ್ರಶ್ನೆಯನ್ನು ಕೇಳಿ ಅವರು ಹೇಳಿದ ಉತ್ತರವನ್ನು ಕನ್ನಡಕ್ಕೆ ಭಾಷಾಂತರಿಸಿ ಸಾಕ್ಷ್ಯವನ್ನು ತೆಗೆದುಕೊಳ್ಳಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಹಿ.ಸ.ಸ.ಅ ರವರಿಂದ ಃ-**

ಅಪಘಾತ ಯಾವ ರೀತಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಚಾಸಾ 6 ರಿಂದ 8, 10 ರಿಂದ 35, 38 ರಿಂದ 46 ಹಾಗೂ 50 ರಿಂದ 76 ರವರ ಪರಿಚಯ ಇರುವುದಿಲ್ಲ. ಆರೋಪಿತರ ಪರಿಚಯ ಇರುವುದಿಲ್ಲ. ಯಾವ ದಿನಾಂಕದಂದು ಏನಾಗಿರುತ್ತದೆ ಗೊತ್ತಿರುವುದಿಲ್ಲ. ಪೋಲಿಸರು ನನ್ನನ್ನು ಕರೆಸಿರುವುದಿಲ್ಲ ಯಾವುದೇ ಹೇಳಿಕೆ ಪಡೆದಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಹಿ.ಸ.ಸ.ಅ. ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದರು – ಅನುಮತಿ ನೀಡಲಾಯಿತು)

**ಪಾಟೀಸವಾಲು – ಮಾನ್ಯ ಹಿ.ಸ.ಸ.ಅ. ರವರಿಂದ ಃ-**

ದಿಃ 28.6.2014 ರಂದು ಮದ್ಯಾಹ್ನ 12.15 ಗಂಟೆಗೆ ಚಿನ್ನಾಕರ ಗ್ರಾಮದ ಸಿಮಾಂತರದಲ್ಲಿ ಬರುವ ಸಣ್ಣ ಮುಕಪ್ಪ ಇವರ ಹೊಲದ ಹತ್ತಿರ ತಿರುವು ಮತ್ತು ಇಳಿಜಾರ

ರಸ್ತೆಯ ಮೇಲೆ ಆರೋಪಿತನು ತನ್ನ ಐಶರ ಡಿಸಿಎಂ ವಾಹನ ನಂ. ಕೆಎ-19-ಬಿ-2331 ನೇದ್ದರಲ್ಲಿ ನನ್ನನ್ನು ಹಾಗೂ ಇನ್ನಿತರ 67 ಜನರನ್ನು ಕುಡಿಸಿಕೊಂಡು ಬೆಟ್ಟದಹಳ್ಳಿ ಗ್ರಾಮದ ಬೊರಬಂಡಾ ಗ್ರಾಮಕ್ಕೆ ಬವರುತ್ತಿರುವಾಗ ಆರೋಪಿತನು ತನ್ನ ವಾಹನವನ್ನು ಅತಿವೇಗ ಹಾಗೂ ಅಲಕ್ಷತನದಿಂದ ನಡೆಸಿಕೊಂಡು ವಾಹನವನ್ನು ರಸ್ತೆಯ ಬಲಭಾಗದಲ್ಲಿ ತೆಗೆದುಕೊಂಡು ಹೊಗಿ ಪಲ್ಟಿ ಮಾಡಿದ್ದರಿಂದ ನನಗೆ ಬಲಗೈ ಮುಂಡಿಗೆ, ಬಲಗಡೆ ಪಕ್ಕಯಲಬುಗಳಿಗೆ ಒಳಪೆಟ್ಟಾಗಿ ಬಲಮೊನಕಾಲಿಗೆ ತೊರಚಿದ ಗಾಯವಾಗಿದ್ದು ಉಳಿದ ಜನರಿಗೆ ಸಾದಾ ಮತ್ತು ಭಾರಿ ಸ್ವರೂಪದ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ.

ಈಗ ವಿವರವಾಗಿ ಒದಿ ಹೇಳಿದಂತೆ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 9 ಎಂದು ಗುರುತಿಸಲಾಯಿತು. ನಿಪಿ 9 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದರು ಹಾಗೂ ಆರೋಪಿತನ ತಪ್ಪಿನಿಂದ ಅಪಘಾತ ಸಂಭವಿಸಿದರೂ ಸಹ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು–ಆರೋಪಿತರ ಪರವಾಗಿ ಶ್ರೀ. ಎಂ.ಎಂ.ಇ. ವಕೀಲರಿಂದ**

ಯಾವುದೇ ಪಾಟೀ ಸವಾಲು ಇಲ್ಲ.

**ಮರುವಿಚಾರಣೆ – ಇಲ್ಲ**

**(ತೇರಿದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿ ಅದೆ**

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ಯಾದಗಿರಿ**